**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**<u>ಸೆಷನ್ಸ್ ಕೇಸ್ ನಂಃ 26/2017</u>** **<u>ಫ್ರಾ.ಸಾ.22</u>**

**<u>ಚಾ.ಸಾ.29</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಸುರೇಶ್ ಶೆಟ್ಟಿ |
| ತಂದೆಯ ಹೆಸರು | - | ಅಚ್ಚು ಶೆಟ್ಟಿ |
| ವಯಸ್ಸು | - | 54 ವರ್ಷ |
| ಉದ್ಯೋಗ | - | ಕೂಲಿ |
| ವಿಳಾಸ | - | ಪೆರ್ಣಂಕಿಲ |

ದಿನಾಂಕಃ 06-12-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ30 ರವರ ಪರಿಚಯ ಇಲ್ಲ. ಪ್ರಸಾದ್ ಪೂಜಾರಿರವರ ಪರಿಚಯ ಇಲ್ಲ. 2 ನೇ ಆರೋಪಿ ಕೊಟ್ಟ ಸ್ವಇಚ್ಚಾ ಹೇಳಿಕೆಯ ಆಧಾರದ ಮೇಲೆ ಪೋಲಿಸರು ಯಾವುದೇ ಸೊತ್ತನ್ನು ಅಮಾನತ್ತುಪಡಿಸಿ ಕೊಂಡಿರುವುದಿಲ್ಲ. ಘಟನೆಗೆ ಸಂಬಂಧಿಸಿದಂತೆ ಪೋಲಿಸರು ನನ್ನನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಈಗ ತೋರಿಸಿದ ನಿಪಿ-12 ರಲ್ಲಿ ನನ್ನ ಸಹಿ ಇದ್ದು, ಸಾಕ್ಷಿಯ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮದಲ್ಲಿ ಕಬ್ಬಿಣದ ಪೈಪ್ ಸ್ಟೀಲಿನ ಚೂರಿ, ಕಬ್ಬಿಣದ ಮಚ್ಚು, ಸರಪಳಿಗಳು, ಬೀಗ ಇವುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸದ್ರಿ ಮಹಜರಿನಲ್ಲಿ ಬರೆದ ಸಂಗತಿಗಳು ನನಗೆ ತಿಳಿದಿರುವುದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**<u>ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದ</u>**

ದಿನಾಂಕ 12-01-2017 ರಂದು ಎರಡನೇ ಆರೋಪಿ ಕೊಟ್ಟ ಸ್ವ ಇಚಾ ್ಚ ಹೇಳಿಕೆಯ ಆಧಾರದ ಮೇಲೆ ಆರೋಪಿ ನಮ್ಮನ್ನು ಮತ್ತು ಪೋಲಿಸರನ್ನು ಪಪೆರ್ಣಂಕಿಲ ಗ್ರಾಮದ ವರ್ವಾಡಿ ಎಂಬಲ್ಲಿರುವ ಶಂಕರ ಕುಲಾಲ ಎಂಬವರ ಮನೆಯ ಹತ್ತಿರ ನಿರ್ಮಾಣದ ಹಂತದಲ್ಲಿರುವ ಸಣ್ಣ ಕಟ್ಟಡದ ಬಳಿ ಕರೆದುಕೊಂಡು ಹೋಗಿ ಕೃತ್ಯಕ್ಕೆ ಬಳಸಿದ ಕಬ್ಬಿಣದ ಪೈಪ್, ಸ್ಟೀಲಿನ ಚೂರಿ, ಕಬ್ಬಿಣದ

ಮಚ್ಚು, ಸರಪಳಿಗಳು ಹಾಗೂ ಒಂದು ಬೀಗವನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-12 ರಂತೆ ಮಹಜರು ಬರೆದು ತನಿಖಾಧಿಕಾರಿ ನಮ್ಮ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸೀಲು ಮಾಡಿರುವ ಒಟ್ಟು ಆರು ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಸಾಕ್ಷಿಗೆ ತೋರಿಸಲಾಗಿ, ಅದೇ ವಸ್ತುಗಳನ್ನು ಆರೋಪಿತನ ಹೇಳಿಕೆಯಂತೆ ಪೋಲಿಸರು ಅಮಾನತ್ತುಪಡಿಸಿ ಕೊಂಡಿರುತ್ತಾರೆ ಎಂದರೆ ಸಾಕ್ಷಿ ಅಮಾನತ್ತುಪಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ಕಬ್ಬಿಣದ ಪೈಪ್ನ್ನು ಮು.ಮಾ.2, ಸ್ಟೀಲಿನ ಚೂರಿಯನ್ನು ಮು.ಮಾ.3, ಕಬ್ಬಿಣದ ಮಚ್ಚನ್ನು ಮು.ಮಾ.4, ಸರಪಳಿಗಳು ಮತ್ತು ಬೀಗವನ್ನು ಮು.ಮಾ.5 ರಿಂದ 7 ಎಂದು ಗುರುತಿಸಲಾಯಿತು. ಅದೇ ರೀತಿ ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-60 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರವಾಗಿ ಪಾಟೀ ಸವಾಲುಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.